4 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರವರ ನ್ಯಾಯಾಲಯ, ಮಂಡ್ಯ.

ಎಸ್ ಸಿ ಕೇಸ್ ನಂ.118/2019

ಪ್ರಾ.ಸಾ. 18

ಚಾ.ಸಾ. 39

ಸಾಕ್ಷಿಯನ್ನು ಕರೆಯಿಸಿ ಪ್ರಮಾಣವಚನ ಬೋಧಿಸಿದ ದಿನಾಂಕ 19.02.2026

ಸಾಕ್ಷಿದಾರರ ಹೆಸರು	ಕುಮಾರ
ತಂದೆಯ ಹೆಸರು	ಪುಟ್ಟೇಗೌಡ
ವಯಸ್ಸು	50 ವರ್ಷ
ಉದ್ಯೋಗ	ಪೊಲೀಸ್ ಇನ್ಸ್ ಪೆಕ್ಟರ್, ಜಯಲಕ್ಷ್ಮಿಪುರಂ ಠಾಣೆ, ಮೈಸೂರು
ವಾಸ	ಮೈಸೂರು

ಮುಖ್ಯ ವಿಚಾರಣೆ: ಮಾನ್ಯ ವಿಶೇಷ ಸರ್ಕಾರಿ ಅಭಿಯೋಜಕರವರಿಂದ:

.1. ನಾನು ದಿನಾಂಕ 23.01.2017 ರಿಂದ ದಿನಾಂಕ 17.09.2018 ರವರೆಗೆ ಪಿ ಎಸ್ ಐ ಆಗಿ ಮದ್ದೂರು ಪೊಲೀಸ್ ಠಾಣೆಯಲ್ಲಿ ಕರ್ತವ್ಯ ನಿರ್ವಹಿಸಿರುತ್ತೇನೆ.

.

.2. ದಿನಾಂಕ 07.11.2017 ರಂದು ಈ ಪ್ರಕರಣಕ್ಕೆ ಸಂಬಂಧಪಟ್ಟ ಹಾಗೆ ಪ್ರಕರಣ ಸಂಖ್ಯೆ 579/2016 ಮತ್ತು 583/2016 ಹಾಗೂ ಈ ಪ್ರಕರಣ ಸಂಖ್ಯೆ 584/2016 ಹಾಗೂ ಎನ್ ಸಿ ಆರ್ ನಂ.912/2016 ಮತ್ತು ದಿನಾಂಕ 25.12.2016 ಮತ್ತು 27.12.2016 ರ ಠಾಣಾ ಎಸ್ ಹೆಚ್ ಡಿ (Station

House Dairy)ಯ ದೃಢೀಕೃತ ನಕಲುಗಳನ್ನು ನಾನು ಚಾಸಾ.40 ರವರ ಕೋರಿಕೆಯ ಮೇರೆಗೆ ಅವರಿಗೆ ನೀಡಿರುತ್ತೇನೆ. ಮೇಲಿನ ಎಲ್ಲಾ ಪ್ರಕರಣಗಳು ನಮ್ಮ ಠಾಣೆಯಲ್ಲಿ ದಾಖಲು ಆದ ಪ್ರಕರಣಗಳು ಆಗಿರುತ್ತವೆ. ಮೇಲೆ ಹೇಳಿದ ಪ್ರಕರಣ ಸಂಖ್ಯೆ 579/2016, 583/2016 ಹಾಗೂ 584/2016 ಮೂಲ ಕಡತಗಳನ್ನು ಮುಂದಿನ ತನಿಖೆಗಾಗಿ ಚಾಸಾ.40 ರವರಿಗೆ ನೀಡಿರುತ್ತೇನೆ. ಎನ್ ಸಿ ಆರ್ ನಂ.912/2016 ಮತ್ತು ಠಾಣಾ ಎಸ್ ಹೆಚ್ ಡಿ (Station House Dairy)ಯ ದೃಢೀಕೃತ ನಕಲುಗಳನ್ನು ಚಾಸಾ.40 ರವರಿಗೆ ತನಿಖೆಯ ಸಲುವಾಗಿ ನೀಡಿರುತ್ತೇನೆ. ನಮ್ಮ ಇಲಾಖೆಯ ಮೇಲಾಧಿಕಾರಿಗಳ ಆದೇಶದಂತೆ ಸದರಿ ಪ್ರಕರಣಗಳ ಕಡತ ಮತ್ತು ದೃಢೀಕೃತ ನಕಲುಗಳನ್ನು ಚಾಸಾ.40 ರವರಿಗೆ ನೀಡಿರುತ್ತೇನೆ.

.

.3. ದಿನಾಂಕ 28.09.2017 ರ ಪತ್ರದಂತೆ ಚಾಸಾ.40 ರವರು ಸದರಿ ಪ್ರಕರಣಗಳ ಕಡತಗಳನ್ನು ನೀಡುವಂತೆ ಕೋರಿಕೊಂಡಿರುತ್ತಾರೆ. ಸದರಿ ಪತ್ರ ನೋಡಿದರೆ ಗುರುತಿಸಬಲ್ಲೆ. ಸಾಕ್ಷಿ ಗುರುತಿಸಿದ ಮೇಲೆ ಹೇಳಿದ ಪತ್ರವನ್ನು ನಿಪಿ.34 ಎಂದು ಗುರುತಿಸಲಾಯಿತು. ಬಳಿಕ ನಾನು ದಿನಾಂಕ 07.11.2017 ರಂದು ಕವಚ ಪತ್ರದ ಜೊತೆ ಸದರಿ ಕಡತಗಳನ್ನು ಚಾಸಾ.40 ರವರಿಗೆ ನೀಡಿರುತ್ತೇನೆ. ಸದರಿ ಕವಚ ಪತ್ರವನ್ನು ಗುರುತಿಸಬಲ್ಲೆ. ಸಾಕ್ಷಿ ಗುರುತಿಸಿದ ಕವಚ ಪತ್ರವನ್ನು ನಿಪಿ.35 ಎಂದು, ಸಾಕ್ಷಿಯ ಸಹಿಯನ್ನು ನಿಪಿ.35 ಎ ಎಂದು ಗುರುತಿಸಲಾಯಿತು. ಎನ್ ಸಿ ಆರ್ ನಂ.912/2016 ರ ದೃಢೀಕೃತ ಪ್ರತಿಯನ್ನು ಗುರುತಿಸಬಲ್ಲೆ, ಅದು ನಿಪಿ.29. ಸಾಕ್ಷಿ ನಿಪಿ.29 ರಲ್ಲಿ ತನ್ನ ಸಹಿ ನೋಡಿ ಗುರುತಿಸಿದ್ದು, ಸಾಕ್ಷಿಯ ಸಹಿಯನ್ನು ನಿಪಿ.29 ಎ ಎಂದು ಗುರುತಿಸಲಾಯಿತು.

ಪಾಟೀ ಸವಾಲುಃ *1* ರಿಂದ *3* ನೇ ಆರೋಪಿತರ ಪರ ಶ್ರೀ ವಿ ಎಸ್ ಭಟ್ ವಕೀಲರಿಂದಃ

1. ನಾನು ಪಿ ಎಸ್ ಐ ರವಿರವರಿಂದ ಠಾಣಾ ಪ್ರಭಾರವನ್ನು ವಹಿಸಿಕೊಂಡಿದ್ದೇನೆ. ದಿನಾಂಕ 29.12.2016 ರಿಂದ 23.01.2017 ರ ಅವಧಿಯಲ್ಲಿ ಈ ಪ್ರಕರಣದ ತನಿಖೆಯನ್ನು ಯಾರೂ ಮಾಡಿರಲಿಲ್ಲ. ದಿನಾಂಕ 29.12.2016 ರಿಂದ 23.01.2017 ರ ಮಧ್ಯೆ ಪ್ರಭಾರ ಎಸ್ ಹೆಚ್ ಓ ರವಿರವರು ಈ

ಪ್ರಕರಣದ ತನಿಖೆಯನ್ನು ನಡೆಸಿದ್ದರು, ಆದರೆ ತನಿಖೆಯಲ್ಲಿ ಈ ಪ್ರಕರಣದ ಆರೋಪಿಗಳಿಂದ ಯಾವುದೇ ಅಪರಾಧಿಕ ಕೃತ್ಯ ನಡೆದಿಲ್ಲ ಹಾಗೂ ಪ್ರಕರಣ ಸಂಖ್ಯೆ 582/2016ರ ಆರೋಪಿಗಳು/ಈ ಪ್ರಕರಣದ ಪಿರ್ಯಾದಿ ಮತ್ತು ಕೆಲವು ಸಾಕ್ಷಿಗಳಿಂದ ಅಪರಾಧ ಕೃತ್ಯ ನಡೆದಿದೆ ಎಂದು ಕಂಡು ಬಂದ ಕಾರಣ, ತನಿಖೆಯನ್ನು ಮುಂದುವರೆಸಿಲ್ಲ ಎಂದರೆ ಸರಿಯಲ್ಲ. ಪ್ರಕರಣ ಸಂಖ್ಯೆ 582/2016ರ 1ನೇ ಆರೋಪಿಯ ರಿಮ್ಯಾಂಡ್ ಅರ್ಜಿಯ ಪ್ರತಿಯನ್ನೂ ಕೂಡ ಚಾಸಾ.40 ರವರು ಕೋರಿದ್ದರು ಎಂದರೆ ಸರಿ. ಆದರೆ ಆ ಕಡತ ಆಗ ನನ್ನ ಬಳಿ ಇರಲಿಲ್ಲ.

<u>ಪಾಟೀ ಸವಾಲುಃ *5* ಮತ್ತು *7* ರಿಂದ *14*ನೇ ಆರೋಪಿತರ ಪರ ಶ್ರೀ ಪಿ ಎನ್ ಕೆ ವಕೀಲರಿಂದಃ</u>

ಮೇಲಿನ ಪಾಟೀ ಸವಾಲನ್ನೇ ಅಳವಡಿಸಿಕೊಂಡಿರುತ್ತಾರೆ.

(ಮರು ವಿಚಾರಣೆಃ ಇಲ್ಲ)

(ನನ್ನ ಉಕ್ತಲೇಖನದ ಮೇರೆಗೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಿದೆ.)

ಓ.ಹೇ.ಕೇ.ಸ.ಒ.

(ಯಾದವ ಕೆ.)
4ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಮಂಡ್ಯ.